ಇದು ಜನತೆಗೆ ಗೊತ್ತಾಗಬೇಕು ನೀವು ಸುಮ್ಮನೆ ಇದ್ದರೆ ನಾಡಿನ ಜನಗಳಿಗೆ ಇದು ಯಾವಾಗ ಗೊತ್ತಾಗಬೇಕು? ಕೋರ್ಟುಗಳಿಗೆ ಯಾವಾಗ ಗೊತ್ತಾಗಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ : ಜನರಲ್ ಆಕ್ಟ್ ಆಪ್ಟೆ ಆಗುತ್ತದೆಂದು ನನಗೂ ಗೊತ್ತಿದೆ. ಇದು ಲ್ಯಾಪ್ಸ್ ಆಗಿ ಸುಮಾರು ಒಂದು ವಾರ ಆಗಿದೆ. ತಾವು ಏನು ರೀವ್ಯಾಲಿಡೇಟ್ ಮಾಡಿದ್ದೇವೆಂದು ಹೇಳಿದ್ದೀರಿ ಆದು ಶಾಸನ ಸಭೆಯ ಗಮನಕ್ಕೆ ಬರಲಿಲ್ಲ. ಈ ರೀತಿ ಲ್ಯಾಪ್ಸ್ ಆಗಿರುವುದು ಪತ್ರಿಕೆಗಳ ಮೂಲಕ ನಮ್ಮ ಗಮನಕ್ಕೆ ಬಂದಿದೆ. ಆದಕ್ಕೆ ಮುಂಚೆ ಇದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೆ? This was the first duty to bring such a legislation before the house and make known to the general public that you are serious about it. So far nothing has been done according to me. If it was extended before 31st December I would like to know why it was not brought before this House.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಕಚೇರಿಗೆ ಬಂದು ಒಂದು ವಿಚಾರದ ಬಗ್ಗೆ ಗಮನ ಸೆಳೆದಿದ್ದೆ. ದಯವಿಟ್ಟು ಅವಕಾಶ ಕೊಡಬೇಕು. ಈ ರಾಜ್ಯದ...

(ಗೊಂದಲ)

Madam Deputy Speaker : He is prepared to make a statement today.

"ಕೊಪ್ಪದಲ್ಲಿ ಲೋಕಾಯುಕ್ತ ಅಧಿಕಾರಿಗಳ ಮೇಲೆ ಹಲ್ಲೆ."

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಬಂದಮೇಲೆ ತಮ್ಮ ಕ್ಲೀನ್ ಗೌರ್ನಮೆಂಟ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಕೊಪ್ಪದಲ್ಲಿ ಡಿವಿಜನಲ್ ಫಾರೆಸ್ಟ್ ಆಫೀಸರ್‌ನ್ನು ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡುವುದಕ್ಕೆ ಹೋದಾಗ ಅಲ್ಲಿನ ಸ್ಥಳೀಯ ಪೋಲೀಸರು ಸಹಕಾರ ಮಾಡಿಲ್ಲ, ಅಲ್ಲಿ ಮಾಡಿದಂಥ ಮಹಜರ್‌ಅಂದರೆ ಪಂಚನಾಮೆ ರೆಕಾರ್ಡ್‌ಗಳನ್ನು ಸುಟ್ಟಿದ್ದಾರೆ. ಅಲ್ಲಿ ಲೋಕಾಯುಕ್ತ ಡಿ.ಎಸ್.ಪಿ.ಯವರು ಯಾವುದೇ ಕಂಪ್ಲೇಂಟ್ ಕೊಡುವುದಕ್ಕೆ ಅವಕಾಶ ಕೊಟ್ಟಿಲ್ಲ, ಲೋಕಾಯುಕ್ತ ಡಿ.ಎಸ್.ಪಿ. ಯವರು ಕೊನೆಗೆ ಚಿಕ್ಕಮಗಳೂರಿಗೆ ಬಂದು ಕಂಪ್ಲೇಂಟ್ ಫೈಲ್ ಮಾಡಿದ್ದಾರೆ. ಇದು ಆಗಿದುದ್ದು 24.12.92ನೇ ತಾರೀಖು. ಅಲ್ಲಿದ್ದ ಸ್ಥಳೀಯ ಆರ್.ಎಫ್.ಓ. ನರಸಿಂಹಯ್ಯ ಅವರು ಮತ್ತು ಸ್ಥಳೀಯ ಶೃಂಗೇರಿ ಶಾಸಕರಾದ ಶಾಮಣ್ಣನವರು ಇಬ್ಬರೂ ಲೋಕಾಯುಕ್ತ ಇನ್‌ವೆಸ್ಟಿಗೇಷನ್‌ಗೆ ಅಡ್ಡ ಬಂದು, ಅಲ್ಲಿದ್ದ ಲೋಕಾಯುಕ್ತ ಆಫೀಸರ್ ಮೇಲೆ ಒತ್ತಡ ತಂದು, ಇದೇ ಪ್ರಕಾರ ಪಂಚನಾಮ ಬರೆಯಬೇಕು, ಅಧಿಕಾರಿ ಮೇಲೆ ಯಾವುದೇ ದೂರು ಇಲ್ಲ ಎಂದು ಹೇಳಬೇಕು ಈ ರೀತಿ ಒತ್ತಾಯ ಮಾಡಿದ್ದಾರೆ, ಈ ರೀತಿ ಆದರೆ ಯಾವ ಪ್ರಕಾರ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯವಾಗಬಹುದು? ನಂತರ ಲೋಕಾಯುಕ್ತ ಆಫೀಸರ್ ಚಿಕ್ಕಮಗಳೂರಿಗೆ ಹೋಗಿ ಕಂಪ್ಲೇಂಟ್ ಮಾಡಿದ್ದಾರೆ, ಕಂಪ್ಲೇಂಟ್ ಯಾರು ಕೊಟ್ಟಿದ್ದಾರೆ ಅವರ ಜೀವಕ್ಕೆ ಭಯ ಇದೆ, ಹೀಗಾಗಿ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ತಾವು ಯಾವ ರೀತಿ ಕ್ರಮ ಡಿ.ಎಫ್.ಓ. ಮತ್ತು ಆರ್.ಎಫ್.ಓ ಮೇಲೆ ತೆಗೆದುಕೊಳ್ಳುತ್ತೀರಿ. ಯಾವ ರೀತಿ

ಲೋಕಾಯುಕ್ತ ಅಧಿಕಾರಿಗೆ ಸಂರಕ್ಷಣೆ ಕೊಡುತ್ತೀರಿ ಎಂದು ಕೇಳುತ್ತೇನೆ, ಸ್ಥಳೀಯ ಶಾಸಕರ ಮೇಲೆ ದೂರು ಮಾಡಿದ್ದಾರೆ, ಆ ದೂರು ನಿಜವಾಗಿದ್ದರೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಸ್ಪಷ್ಟವಾಗಿ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಏನು ವಿಚಾರ ಎತ್ತಿದ್ದೀರಿ ಇದು ಸರಕಾರದ ಗಮನದಲ್ಲಿದೆ. ಇದರ ಬಗ್ಗೆ ನಾನು ಸಂಜೆಯ ಒಳಗೆ ಸದನ ಇವತ್ತು ಮುಗಿಯುವುದರೊಳಗೆ ಒಂದು ಹೇಳಿಕೆ ಕೊಡುತ್ತೇನೆ.

"ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡುವ ಬಗ್ಗೆ"

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ 369 ಜನ ಅರೆಕಾಲಿಕ ಉಪನ್ಯಾಸಕರು ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸುಮಾರು 5-10 ವರ್ಷಗಳಿಂದ ಇವರು ಉದ್ಯೋಗ ಮಾಡುತ್ತಿದ್ದಾರೆ. ಇವರಿಗೆ ಕೊಡುತ್ತಿರತಕ್ಕ ಸಂಬಳ ಕೇವಲ ಆರು ನೂರು ರೂಪಾಯಿ. ಇವರಿಗೆ 35 ವರ್ಷ ಮೀರಿ ಹೋಗುತ್ತಿದೆ. ಮೊನ್ನೆ ಪಿ.ಎಸ್.ಸಿ.ಯಿಂದ ಸೆಲೆಕ್ಷನ್ ಆಯಿತು. ಇವರಿಗೆ ಅದರಲ್ಲಿ ಅವಕಾಶ ಸಿಗಲಿಲ್ಲ. ಇವರು ಎಕ್ಸಾಮಿನೇಷನ್ ವರ್ಕ್, ಎಲೆಕ್ಷನ್ ವರ್ಕ್ ಖಾಯಂ ಲೆಕ್ಚರರ್‌ಗಳು ಮಾಡುವ ರೀತಿ ಎಲ್ಲಾ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಉದ್ಯೋಗವನ್ನು ಖಾಯಂ ಮಾಡುವ ದಿಕ್ಕಿನಲ್ಲಿ ಸರಕಾರದ ಪ್ರಯತ್ನ ಆಗಿಲ್ಲ. ಇವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಪ್ರತಿಸಲ ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಬರುತ್ತಾರೆ. ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಎಲ್ಲಾ ಹೇಳುತ್ತಾರೆ. ಇವರು ಇರತಕ್ಕದ್ದು 6 ನೂರು ಜನ ಮಾತ್ರ. ಜಾಸ್ತಿ ಇಲ್ಲ. ಇವರಿಗೆ ಖಾಯಂ ಮಾಡುವ ಪ್ರಯತ್ನದ ಬಗ್ಗೆ ಸರಕಾರ ಯೋಚನೆ ಮಾಡುತ್ತದೆಯೇ? ಇವರಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡುವ ದಿಕ್ಕಿನಲ್ಲಿ ಸರಕಾರ ಯೋಚನೆ ಮಾಡಿ ಇವರಿಗೆ ಖಾಯಂ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಅನೇಕ ಸಾರಿ ಇವರುಗಳು ಸರಕಾರಕ್ಕೆ ಮನವಿಗಳ ಮೇಲೆ ಮನವಿ ಕೊಟ್ಟಿರುತ್ತಾರೆ. ನಿಯೋಗಗಳ ಮೇಲೆ ನಿಯೋಗಗಳು ಬಂದಿದೆ. ಈ ಸರಕಾರ ಎಂದು ನಾನು ಹೇಳುವುದಿಲ್ಲ. ಈ ಸರಕಾರವನ್ನು ಅವರು ಭೇಟಿ ಮಾಡಿರಬಹುದು. ಬಿಟ್ಟಿರಬಹುದು ನನಗೆ ಗೊತ್ತಿಲ್ಲ.

ಶ್ರೀ ಸಿ. ಭೈರೇಗೌಡ : ಆಗಿನ ವಿದ್ಯಾ ಮಂತ್ರಿಗಳು ಈಗ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ವಿಚಾರ ಎಲ್ಲಾ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಅರೆಕಾಲಿಕ ಉಪನ್ಯಾಸಕರ ವಿಚಾರ ತಮಗೆ ಗೊತ್ತಿದೆ. ಇದು ಪ್ರಾಮುಖವಾದ ವಿಚಾರ. ಇದರ ಬಗ್ಗೆ ತಾವು ಗಮನಹರಿಸಿದ್ದೀರಿ. ತೀರ್ಮಾನ ಮಾಡಿದ್ದೀರಿ, ಭರವಸೆ ಕೊಟ್ಟಿದ್ದೀರಿ. ಮತ್ತೆ ಮತ್ತೆ ಪ್ರತಿಸಾರಿ ಶಾಸನಸಭೆ ಸೇರಿದಾಗ ಅವರುಸತ್ಯಾಗ್ರಹ ಮಾಡತಕ್ಕ ಪರಿಸ್ಥಿತಿ ಇದೆ, ಸರಕಾರ ಅವರ ಒಂದು ತೊಂದರೆಯನ್ನು ನಿವಾರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರೋಸ್ಟರ್ ಸಿಸ್ಟಮ್ ಪ್ರಕಾರ ಆಯ್ಕೆಯಾಗಿದ್ದಾರೆ. ಇದು ತಮಗೆ ಗೊತ್ತಿದೆ. ತಾವು ಎಜುಕೇಷನ್ ಮಿನಿಸ್ಟರ್